# <u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>

**C.C. - 35-24** **ಪಿಡಬ್ಲ್ಯೂ ಃ** **<u>10</u>**

**ಸಿಡಬ್ಲ್ಯೂ ಃ** **<u>17</u>**

ಸಾಕ್ಷಿದಾರರ ಹೆಸರು ಃ ಪುನೀತ್‌ಕುಮಾರ

ತಂದೆ ಹೆಸರು ಃ ಶಿವಣ್ಣ

ವಯಸ್ಸು ಃ 30 ವರ್ಷ

ಉದ್ಯೋಗ ಃ ಪಿ ಎಸ್ ಐ

ವಾಸಸ್ಥಳ ಃ ಸಿ ಸಿ ಬಿ, ಹುಬ್ಬಳ್ಳಿ- ಧಾರವಾಡ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 18.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಪೂರ್ವ ಸಂಚಾರಿ ಪೋಲಿಸ ಠಾಣೆ ಯಲಿ ದಿಃ 1.3.2023 ರಿಂದ ದಿಃ 1.11.2024 ವರೆಗೆ ನಾನು ಪಿ ಎಸ್ ಐ ಅಂತಾ ಸದರಿ ಠಾಣೆಯಲ್ಲಿ ಕೆಲಸ ಮಾಡಿದ್ದೇನೆ.

ದಿಃ 3.11.2023 ರಂದು ನಾನು ಪೆಟ್ರೊಲಿಂಗ ಸೇವೆಯಲ್ಲಿದ್ದಾಗ, ಠಾಣಾಧಿಕಾರಿ ನನಗೆ ಫೋನ್ ಮಾಡಿ ಕಿಮ್ಸ ಆಸ್ಪತ್ರೆಯಿಂದ ಎಂ ಎಲ್ ಸಿ ವರದಿ ಬಂದಿದೆ ಎಂದು ಹೇಳಿದರು. ನಾನು ವಿಚಾರಣೆ ಮಾಡಲು ನಮ್ಮ ಸಿಬ್ಬಂದಿ ಚಾಸಾ -13 ರವರನ್ನು ಕಿಮ್ಸ ಆಸ್ಪತ್ರೆಗೆ ಕಳಿಸಿಕೊಟ್ಟಿದ್ದೇನೆ. ವೈದ್ಯರು ಗಾಯಾಳು ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇಲ್ಲವೆಂದು ಹೇಳಿದ ಮೇರೆಗೆ, ನಾನೇ ಆಸ್ಪತ್ರೆಗೆ ಹೋದೆನು. ಅಲ್ಲಿ ಚಾಸಾ-1 ರವರು ಹಾಜರಿದ್ದು, ಅವರ ಹೇಳಿಕೆ ದೂರನ್ನು ಸ್ವೀಕಾರ ಮಾಡಿ ಠಾಣೆಗೆ ಬಂದು, ಠಾಣಾ ಗುನ್ನಾ ನಂಃ 73/2023 ರಲ್ಲಿ ಪ್ರಕರಣ ದಾಖಲ್ ಮಾಡಿಕೊಂಡು ಪ್ರಥಮ ವರ್ತಮಾನ ವರದಿ ಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಕಳಿಸಿಕೊಟ್ಟಿದ್ದೇನೆ. ದೂರು ಈಗಾಗಲೇ ನಿಪಿ.6 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿ ನಿಪಿ.6-ಬಿ ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿ ಯನ್ನು ನಿಪಿ.24 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿಪಿ.24-ಎ ಎಂದು ಗುರುತಿಸಲಾಯಿತು. ನಂತರ ಘಟನಾ ಸ್ಥಳಕ್ಕೆ ಬೆಟ್ಟಿ ನೀಡಿ, ಅಲ್ಲಿ ಸ್ಥಳೀಯರನ್ನು ವಿಚಾರಿಸಿದಾಗ, ಕೆಎ-63/0933 ಆಟೋ ಅಪಘಾತ ಮಾಡಿದೆ ಎಂದು ಹೇಳಿದರು.

ನಾನು ನಮ್ಮ ಸಿಬ್ಬಂದಿಗೆ ಆಟೋ ಪತ್ತೆ ಮಾಡಿ ನನ್ನ ಮುಂದೆ ಹಾಜರಪಡಿಸುವಂತೆ ಮೆಮೋ ನೀಡಿದ್ದೇನೆ. ಮೇಮೋ ಈಗಾಗಲೇ ನಿಪಿ.21 ಎಂದು ಗುರುತಿಸಲಾಗಿದೆ. ಸಾಕ್ಷಿ ಸಹಿನಿಪಿ.21-ಎ ಎಂದು ಗುರುತಿಸಲಾಯಿತು. ನಂತರ ನಮ್ಮ ಸಿಬ್ಬಂದಿ ನಿಪಿ.22 ರಂತೆ ನನ್ನ ಮುಂದೆ ವರದಿ ನೀಡಿದ್ದಾರೆ. ಅದನ್ನು ಸ್ವೀಕಾರ ಮಾಡಿ ಕಡತಕ್ಕೆ ಅಳವಡಿಸಿಕೊಂಡಿದ್ದು, ಸಾಕ್ಷಿಯೂ ನಿಪಿ.22 ಎಂದು ಗುರುತಿಸಿರುತ್ತಾರೆ. ಅದೇ ದಿನ ಚಾಸಾ-2 ಹಾಗೂ 3 ರವರ ಸಮಕ್ಷಮ ವಾಹನ ತಡೆ ಹಿಡಿದ ಪಂಚನಾಮೆ ನಿಪಿ.1 ನ್ನು ಮಾಡಿದ್ದೇನೆ. ಹಾಗೂ ಆಟೋವನ್ನು ಅಮಾನತ್ ಪಡಿಸಿಕೊಂಡು ಪಿ ಎಫ್ ದಲ್ಲಿ ನಮೂದು ಮಾಡಿ ನ್ಯಾಯಾಲಯಕ್ಕೆ ಕಳಿಸಿಕೊಟ್ಟಿದ್ದೇನೆ. ನಿಪಿ.1 ರಲ್ಲಿರುವ ಸಾಕ್ಷಿ ಸಹಿ ನಿಪಿ.1-ಬಿ ಎಂದು ಗುರುತಿಸಲಾಯಿತು. ಪೋಟೋ ವನ್ನು ನಿಪಿ.2 ಎಂದು ಗುರುತಿಸಲಾಯಿತು. ಚಾಸಾ-7 ರವರು ಘಟನಾ ಸ್ಥ.,ಳ ತೋರಿಸಿದ ಮೇರೆಗೆ ಚಾಸಾ-2 ಹಾಗೂ 3 ರವರ ಸಮಕ್ಷಮ ಮಃ 1.30 ಗಂಟೆಯಿಂದ 2.30 ಗಂಟೆವರೆಗೆ ಘಟನಾ ಸ್ಥಳದಲ್ಲಿ ನಿಪಿ.3 ರಂತೆ ಪಂಚನಾಮೆ ಮಾಡಿದ್ದೇನೆ. ಸಾಕ್ಷಿ ಸಹಿ ನಿಪಿ.3-ಬಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.4 ಹಾಗೂ 5 ರಂತೆ ಪೊಟೋಗಳನ್ನು ನೋಡಿ ಗುರುತಿಸಿದ್ದಾರೆ. ಚಾಸಾ-7 ರಿಂದ 12 ರವರ ಹೇಳಿಕೆ ಪಡೆದಿದ್ದೇನೆ. ನಾನು ವಾಹನ ಮಾಲಿಕರಿಗೆ ಐ ಎಂ ವಿ ವರದಿ ಕಲಂ-133 ರ ಅಡಿಯಲ್ಲಿ ನೋಟಿಸು ನೀಡಿದ್ದೇನೆ. ಸದರಿ ನೋಟಿಸನ್ನು ನಿಪಿ.25 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿ ನಿಪಿ.25-ಎ ಎಂದು ಗುರುತಿಸಲಾಯಿತು. ನಂತರ ವಾಹನ ಮಾಲಿಕರು ಆಟೋ ರಿಕ್ಷಾ ನಂಃ ಕೆಎ-63/ 0933 ವಾಹನಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರಪಡಿಸಿದ್ದು, ಅವುಗಳನ್ನು ಸ್ವೀಕಾರ ಮಾಡಿ ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ಅದೇ ದಿನ ಆರೋಪಿ ಠಾಣೆಗೆ ಹಾಜರಾಗಿದ್ದು, ಅರೋಪಿ ಯನ್ನು ವಿಚಾರಣೆ ಮಾಡಿದಾಗ ಆರೋಪಿ ಒಪ್ಪಿಕೊಂಡ ಮೇರೆಗೆ ದಸ್ತಗಿರಿ ಮಾಡಿ ದಸ್ತಗಿರಿ ನಿಯಮ ಪಾಲಿಸಿ ಬಿಡುಗಡೆ ಮಾಡಿದ್ದೇನೆ. ಸಾಕ್ಷಿ ಯೂ ನ್ಯಾಯಾಲಯದ ಮುಂದಿರುವ ಆರೋಪಿ ನೋಡಿ ಗುರುತಿಸಿದ್ದಾರೆ. ಮರುದಿನ ಕಿಮ್ಸ ಆಸ್ಪತ್ರೆಗೆ ಹೋಗಿ ವೈದ್ಯರನ್ನು ವಿಚಾರಿಸಿದಾಗ, ವೈದ್ಯರು ಗಾಯಾಳು ಹೇಳಿಕೆ ಕೊಡುವ ಸ್ಥಿತಿಯಲ್ಲಿಲ್ಲವೆಂದು ಹೇಳಿದರು. ನಿಪಿ.23 ನ್ನು ಸ್ವೀಕಾರ ಮಾಡಿ ಕಡತಕ್ಕೆ ಅಳವಡಿಸಿಕೊಂಡಿದ್ದು, ಸಾಕ್ಷಿ ಸಹಿ ನಿಪಿ.23-ಎ ಎಂದು ಗುರುತಿಸಲಾಯಿತು. ಗಾಯಾಳು ಮೃತ ಹೊಂದಿದ್ದರಿಂದ ಮುಂದಿನ ತನಿಖೆಯನ್ನು ಚಾಸಾ-18 ರವರಿಗೆ ವಹಿಸಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ M V S, ವಕೀಲರಿಂದಃ**

ನನಗೆ ಫೋನ್ ಬಂದಾಗ ಬೆಃ 11.15 ಗಂಟೆಯಾಗಿರಬಹುದು. ನಾನೇ ಕಿಮ್ಸ ಆಸ್ಪತ್ರೆಗೆ ಹೋಗಿದ್ದೆನು. ಮೊದಲು ನಮ್ಮ ಸಿಬ್ಬಂದಿ ಹೋಗಿದ್ದರು. ನಂತರ ನಾನು ಹೋಗಿದ್ದೇನೆ. ನಮ್ಮ ಸಿಬ್ಬಂದಿ ಠಾಣೆಯಲ್ಲಿದ್ದರು. ಅವರು ಆಸ್ಪತ್ರೆಗೆ ಹೋದಾಗ 11.30 ಗಂಟೆಯಾಗಿರಬಹುದು. ನಮ್ಮ ಠಾಣೆಯಿಂದ ಕಿಮ್ಸ ಆಸ್ಪತ್ರೆ 3 ಕಿಮೀ ಆಗುವುದಿಲ್ಲ, 2 ಕಿಮೀ ಆಗುತ್ತದೆ. 10 -15 ನಿಮಿಷದಲ್ಲಿ ಆಸ್ಪತ್ರೆಗೆ ಹೋಗಬಹುದು. ನಾನು ಆಸ್ಪತ್ರೆಗೆ ಹೋದಾಗ 11.45 ಆಗಿತ್ತು. ಚಾಸಾ-1 ರವರು ಹೇಳಿದ್ದನ್ನು ನಮ್ಮ ಸಿಬ್ಬಂದಿ ಬರೆದಿರುತ್ತಾರೆ. ಚಾಸಾ-1 ರವರು ಪ್ರತ್ಯಕ್ಷ ಸಾಕ್ಷಿದಾರರು ಅಲ್ಲ ಅಂದರೆ ಸರಿ. ಚಾಸಾ-1 ರವರು ಮನೆಯಿಂದ ಘಟನಾ ಸ್ಥಳಕ್ಕೆ ಬಂದು, ಗಾಯಾಳುವನ್ನು ಆಸ್ಪತ್ರೆಗೆ ಅಪಘಾತ ಪಡಿಸಿದ ವಾಹನದಲ್ಲಿ ಕರೆದುಕೊಂಡು ಬಂದಿದ್ದಾರೆ. ಆಟೋವನ್ನು ಪತ್ತೆ ಮಾಡಲು ಮೆಮೋ ನೀಡಿದ್ದೇನೆ. ಆಟೋವನ್ನು 4 ನೇ ತಾರೀಖಿಗೆ ಹಾಜರಪಡಿಸಿದ್ದಾರೆ. ಫೋಟೋದಿಂದ ಘಟನಾ ಸ್ಥಳ ಗೊತ್ತಾಗುವುದಿಲ್ಲ ಅಂದರೆ ಸರಿಯಲ್ಲ. ಫೊಟೋ ದ ಮೇಲೆ ದಿನಾಂಕ ಇಲ್ಲವೆಂದರೆ ಸರಿ. ನಿಜವಾಗಿ ಘಟನೆ ನಡೆದಿದ್ದರೆ ಫೋಟೋದಲ್ಲಿ ದಿನಾಂಕ ಬರುತ್ತಿತ್ತು. ಘಟನೆ ನಡೆದಿಲ್ಲ. ಫೊಟೋ ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ. ಆರೋಪಿ ಹಾಗೂ ಆಟೋ ರಿಕ್ಷಾ ಅಪಘಾತ ದಲ್ಲಿ ಭಾಗಿಯಾಗಿಲ್ಲ ಅಂದರೆ ಸರಿಯಲ್ಲ. ನಾವೇ ಪಂಚನಾಮೆ ಬರೆದು ಪಂಚರ ಸಹಿ ಪಡೆದಿದ್ದೇವೆ ಅಂದರೆ ಸರಿಯಲ್ಲ. ಪಂಚರಿಗೆ ಅದರಲ್ಲಿ ಬರೆದ ವಿಷಯ ಗೊತ್ತಿಲ್ಲ ಅಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಅಂದರೆ ಸರಿಯಲ್ಲ. ಆರೋಪಿ ಠಾಣೆಗೆ ಹಾಜರಾಗಿಲ್ಲ ಅಂದರೆ ಸರಿಯಲ್ಲ. ದಸ್ತಗಿರಿ ಮಾಡಿಲ್ಲ ಅಂದರೆ ಸರಿಯಲ್ಲ. ಕಿಮ್ಸ ಆಸ್ಪತ್ರೆಗೆ ಹೋಗದೇ ಘಟನಾ ಸ್ಥಳಕ್ಕೆ ಹೋಗದೆ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ. ಘಟನೆಗೆ ಹಾಗೂ ಆರೋಪಿಗೂ ಸಂಬಂಧವಿಲ್ಲ ಅಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.